ಅಧ್ಯಕ್ಷರು : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿ ಕೊಡಲಾಗುವುದು.

4. ಅಧ್ಯಕ್ಷರ ತೀರ್ಪು

ವಿಷಯ : ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರು ರಾಜ್ಯಪಾಲರಿಗೆ ಬರೆದಿರುವ ಪತ್ರದ ಪ್ರತಿಕ್ರಿಯೆ ನೀಡಿರುವ ವಿಷಯದ ಬಗ್ಗೆ.

ಅಧ್ಯಕ್ಷರು : ನಾನು ಇದನ್ನು ಪರೀಶಿಲನೆ ಮಾಡುತ್ತೇನೆ. ಏಕೆಂದರೆ ಇದೊಂದು ಟೆಕ್ನಿಕಲ್ ಪಾಯಿಂಟ್. It is between the Leader of the Opposition of the Council and the Governor. ನಾನು ಎಲ್ಲಾ ಅಸ್ಪೆಕ್ಟ್‌ಗಳನ್ನು ನೋಡುತ್ತೇನೆ. Legal aspect ಎಲ್ಲವನ್ನೂ ನೋಡಬೇಕಾಗುತ್ತದೆ. Then I will give my ruling.

5. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅ ಎಸ್.ಬಿ. ಪಾಟೀಲ್(ಅಪರ ಕಾರ್ಯದರ್ಶಿಗಳು) : ಮಾನ್ಯ ಅಧ್ಯಕ್ಷರೆ, ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಸನ್ಮಾನ್ಯ ರಾಜ್ಯಪಾಲರಿಂದ ಪುನರ್‌ಪರಿಗಣನೆಗೆ ಹಿಂತಿರುಗಿಸಲ್ಪಟ್ಟಿರುವ 2006ನೇ ಸಾಲಿನ ಕರ್ನಾಟಕ ವಿಧಾನ ಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಆ ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2005ರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮದ ಅಧ್ಯಾಯ 6.33 (2) ರ ಪ್ರಕರಣದ ಮೇರೆಗೆ;

2006ರ ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ ನಿಯಮಗಳನ್ನು ಮತ್ತು ಕರ್ನಾಟಕ ರಾಜ್ಯ ನಿರುದ್ಯೋಗ ಭತ್ಯೆ ಸಂದಾಯ ನಿಯಮಗಳನ್ನು ದಿನಾಂಕ 13.6.2006ರಂದು ಹೊರಡಿಸಲಾದ ಗ್ರಾಅಪ:41ಉಖಾಯೋ (ಭಾಗ–1) 5ನೇ ಸಂಖ್ಯೆ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಈಗ ಏನೆಂದರೆ, Parliamentary Affairs Minister ದಯಮಾಡಿ ಮಾತನಾಡಬೇಕು. ಈಗ ಬಹಳ ಜನ ಈ ಭಾಗದ ಸದಸ್ಯರು ಈ ಭಾಗದ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕೆಂದು well ಗೆ ಬಂದುಬಿಟ್ಟಿದ್ದರು. ಆದ್ದರಿಂದ, ಕೆಲವು important Bills ಇವೆ. ಆದ್ದರಿಂದ, ಮೊದಲು.....

6. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ಅ. ವಿಷಯ : 150 ಕೋಟಿ ರೂಪಾಯಿ ಗಣಿ ಲಂಚದ ಆಪಾದನೆಯ ಬಗ್ಗೆ

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ನಾನು ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದೇನೆ. ಅದು ಬಂದು ನಿಮಗೆ ತಲುಪಿದೆಯೋ, ಇಲ್ಲವೋ?

ನನಗೆ ಗೊತ್ತಿಲ್ಲ. ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದೇನೆ. ಇವತ್ತು ನಮ್ಮ ರಾಜ್ಯದಲ್ಲಿ ಏನು ನಡೆಯುತ್ತಿದೆ ಅದು ಪತ್ರಿಕೆಯಲ್ಲೂ ಬಂದಿದೆ. ಇವತ್ತು ನಾವು ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಿಂತಿದ್ದೇವೆ. ಈಗಾಗಲೇ ಜನಾರ್ಧನ ರೆಡ್ಡಿಯವರು ಮಾನ್ಯ ಮುಖ್ಯಮಂತ್ರಿಗಳ ಮೇಲೆ ಮಾಡಿದಂಥ 150 ಕೋಟಿ ರೂಪಾಯಿ ಆಪಾದನೆ ಇದೆ. 2ನೆಯದಾಗಿ, CNN Channel ನಲ್ಲಿ ಮತ್ತು ಎಲ್ಲಾ National Electronic media ದಲ್ಲಿ ಬಂದಿದೆ.

(ಅಡಚಣೆ)

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ನೋಡಿ, ಗಲಾಟೆ ಮಾಡುವವರೆಲ್ಲರನ್ನೂ ಹೊರಗಡೆಗೆ ಕಳುಹಿಸಿಬಿಡುತ್ತೇನೆ. ಎಲ್ಲರೂ ದಯಮಾಡಿ, ಕುಳಿತುಕೊಳ್ಳಿ, ಯಾವುದಾದರೂ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವ ಬಗ್ಗೆ ಪ್ರಸ್ತಾಪ ಮಾಡುತ್ತಾರೆ. ಅದರ ಬಗ್ಗೆ ನಿಮಗೆ ವಿಚಾರ ಗೊತ್ತಿದ್ದರೆ, ಉತ್ತರ ಕೊಡತಕ್ಕಂಥ ಶಕ್ತಿ ಇದ್ದರೆ ಕೊಡಿ. ಇಲ್ಲದಿದ್ದರೆ Parliamentary Affairs Minister ಮತ್ತು Chief Minister ಇಲ್ಲಿದ್ದಾರೆ. ಅವರು ಉತ್ತರ ಕೊಡುತ್ತಾರೆ. ಅದನ್ನು ಬಿಟ್ಟುಬಿಟ್ಟು ಪ್ರತಿಯೊಂದಕ್ಕೂ ಎದ್ದುನಿಂತುಕೊಂಡು ಗಲಾಟೆ ಮಾಡುವುದು ಸರಿಯಲ್ಲ. No ದಯಮಾಡಿ. ಕುಳಿತುಕೊಳ್ಳಿ. ನಾನು ಹೊರಗಡೆ ಕಳುಹಿಸಿಬಿಡುತ್ತೇನೆ. ಹೊರಗಡೆ ಕಳುಹಿಸಬಾರದೆಂದು ಸಂಯಮದಿಂದ ಇದ್ದರೆ, ನೀವು ಅದನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದೀರಿ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಸಭಾಧ್ಯಕ್ಷರೆ, ತಮಗೆ ಧನ್ಯವಾದಗಳು. ಏಕೆಂದರೆ, ತಮ್ಮ ಹಸ್ತಕ್ಷೇಪದಿಂದ ಇವತ್ತು ಎಲ್ಲಾ ಸದಸ್ಯರಿಗೂ ಹೇಳುತ್ತಿದ್ದೀರಿ. ನಾವು ಇಲ್ಲ ಸಲ್ಲದ ಆರೋಪಗಳನ್ನು ಮಾಡುವುದಕ್ಕೆ ನಿಂತಿಲ್ಲ. ಅಧಿವೇಶನ ನಡೆಯುತ್ತಿದೆ. ಅದರಲ್ಲೂ ಕೂಡ ಗಡಿ ಭಾಗದಲ್ಲಿ ನಡೆಯುತ್ತಿದೆ. ನಾವು ಸರ್ಕಾರ ಮಾಡುತ್ತಿರುವಂಥ ಅಧಿವೇಶನಕ್ಕೆ ಬೆಂಬಲವನ್ನು ಕೊಟ್ಟಿದ್ದೇವೆ. ನಾವು ಯಾವಾಗಲೂ ಕೂಡ ಅಲ್ಲಿ ವಿಧಾನಸಭೆ ನಡೆಯುವಂಥ ಕಾಲದಲ್ಲಿ ನಮ್ಮ ಆರೋಪ ಏನೂ ಇಲ್ಲ. 150 ಕೋಟಿ ರೂಪಾಯಿ ಲಂಚದ ಪ್ರಕರಣ ಅವರ ಮಿತ್ರ ಪಕ್ಷದ ಬಳ್ಳಾರಿ ಬಿಜೆಪಿ ಅಧ್ಯಕ್ಷರಾದ ಜನಾರ್ಧನರೆಡ್ಡಿಯವರು C.D. ಮುಖಾಂತರ ಪ್ರಚಾರ ಮಾಡಿದ್ದಾರೆ.

(ಅಡಚಣೆ)

ಅಧ್ಯಕ್ಷರು : ಅದರ ಬಗ್ಗೆ ಚರ್ಚೆಯಾಗಿದೆ. ಬಿಡಿ

ಶ್ರೀ ಎನ್. ಧರ್ಮಸಿಂಗ್ : ಈಗ ಮತ್ತೊಂದು ಬಂದಿದೆಯಲ್ಲ. ಇಲ್ಲ, ಇವತ್ತು ನಮ್ಮ ರಾಜ್ಯದ transport commissioner ಏನು ಇದ್ದರೆ, ಅವರು ಏಜೆಂಟರ ಜೊತೆಯಲ್ಲಿ ಮಾತನಾಡಿದ್ದಾರೆ. ಆ ಒಂದು ಜಾಲದ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. national media ದಲ್ಲಿಯೂ ಕೂಡ ಬಂದಿದೆ.

ಅಧ್ಯಕ್ಷರು : ಅವರು adjournment motion ಬಗ್ಗೆ preliminary submission ಮಾಡುತ್ತಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎನ್. ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ನಾವು ನಿಲುಳಿ ಸೂಚನೆಯಡಿಯಲ್ಲಿ ಏನು ಹೇಳುತ್ತಿದ್ದೇವೆಂದರೆ, ಇವತ್ತು ಮುಖ್ಯಮಂತ್ರಿಗಳ ಮೇಲೆ ಮೇಲಿಂದ ಮೇಲೆ ಬರತಕ್ಕಂತಹ ಆರೋಪ ಎನಿದೆ, ನಿನ್ನೆ ಬಂದಂತಹ ಆರೋಪ ಬಹಳ ಗಂಭೀರವಾದಂತಹ ಆರೋಪ, ಸದನ ನಡೆಯತಕ್ಕಂತಹ ಕಾಲದಲ್ಲಿ ಮುಖ್ಯಮಂತ್ರಿಗಳು ಆ ಸ್ಥಾನದಲ್ಲಿ ಒಂದು ನಿಮಿಷ ಇರುವುದಕ್ಕೆ ಸಾಧವಿಲ್ಲ. ನಾವು ಇವತ್ತು ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಕೇಳುತ್ತಿದ್ದೇವೆ. ಮುಖ್ಯಮಂತ್ರಿಗಳ ಮೇಲೆ ಏನು ಈ ತರಹ ಆರೋಪನೆ ಟಿವಿಯಲ್ಲಿ ಬಂದಿದೆ, ಅದರ ಬಗ್ಗೆ ಅವರು ಯಾವ ರೀತಿಯಲ್ಲಿಸ ಹೇಳುತ್ತಾರೆಂದು ನಾವು ಕೇಳುವುದಕ್ಕೆ ನಿಂತಿದ್ದೇವೆ. ತಾವು ಇದಕ್ಕೆ ಅನುಮತಿಯನ್ನು ಕೊಡಬೇಕು, ಬಹಳ ಸಮಗ್ರವಾದ ಚರ್ಚೆಯಾಗಬೇಕು. ರಾಜ್ಯದಲ್ಲಿ ಆಗತಕ್ಕಂತಹ ಈ ಎಲ್ಲಾ ಹಗರಣಗಳ ಸುರಿಮಳೆಗಳು ಏನಿದೆ, ಇದನ್ನು ಪ್ರಸ್ತಾಪ ಮಾಡತಕ್ಕಂಥ ರೀತಿಯಲ್ಲಿ ನಿಲುವಳಿ ಸೂಚನೆ ಮುಖಾಂತರ ಅಧ್ಯಕ್ಷರ ಅಪ್ಪಣೆಯನ್ನು ಕೇಳುತ್ತಿದ್ದೇವೆ. ಅಧ್ಯಕ್ಷರು ತಾವು ಅಪ್ಪಣೆಯನ್ನು ಕೊಟ್ಟರೆ ನಾವೆಲ್ಲರೂ ಕೂಡ ಚರ್ಚೆಯಲ್ಲಿ ಭಾಗವಹಿಸಿ ಇದರ ಬಗ್ಗೆ ವಿಶೇಷವಾದಂತಹ ರೀತಿಯಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ ಎಂಬುವುದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನಮಗೆ ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೆಚ್ಚಿಗೆ ಏನು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಈಗಾಗಲೇ ಎಲ್ಲಾ ಪತ್ರಿಕೆಯಲ್ಲೂ ಬಂದಿದೆ. ಅದಕ್ಕೆ ನಾವು ಕೇಳಿದ್ದೇವೆ ನೇರವಾಗಿ ತನಿಖೆಗೆ C.B.I. ಗೆ ಕೊಡಿ. ಮತ್ತೆ ಕೆಲವು ಬೇರೆ ಹೊರಗಡೆಯೂ ಕೂಡ ನಮ್ಮ ಬಗ್ಗೆಯೂ ಕೂಡ ಮಾತನಾಡಿರುವುದನ್ನು ನಾನು ಕೇಳಿದ್ದೇನೆ.

7. ಮಾನ್ಯ ಎಂ.ಪಿ. ವೆಂಕಟೇಶ್‌ರವರು ಕಲರ್, ಫೋಟೊವನ್ನು ಸದನದಲ್ಲಿ ಪ್ರದರ್ಶಿಸಿದ ಬಗ್ಗೆ.

(ಈ ಹಂತದಲ್ಲಿ ಮಾನ್ಯ ಎಂ.ಪಿ. ವೆಂಕಟೇಶ್‌ರವರು ಒಂದು colour photoವನ್ನು ಪ್ರದರ್ಶಿಸಿದರು)

(ಅಡಚಣೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮದು ಏನಾದರೂ ಇದ್ದರೆ ಅದನ್ನು ಸೇರಿಸಿಯೇ CBI ಗೆ ಕೊಟ್ಟುಬಿಡಿ. ಅವರದ್ದನ್ನೂ ಕೊಡಿ. ಸಾರ್ ಈಗ ಅವರು ತೋರಿಸುತ್ತಿದ್ದಾರಲ್ಲಾ. I request you, ಆ photo ವನ್ನು ತಾವು ತಕ್ಷಣ ತೆಗೆದುಕೊಂಡು you refer it to CBI. Let us see. I will face it If you have got guts. CBI ಗೆ ಕೊಡಿ. ಎಲ್ಲಾ ದಾಖಲೆಗಳನ್ನು CBI ಗೆ refer ಮಾಡಿ.